# ಯೋಗಸಾಧನೆಯ ಪ್ರದೀಪ್ತ ಭಾಸ್ಕರ ತ್ರೈಲಂಗಸ್ವಾಮಿಗಳು

❑ ಕುಮಾರಿ ಪಿ. ಉಷಾ

ಭಗವಾನ್ ಶ್ರೀರಾಮಕೃಷ್ಣರು ವಾರಾಣಸಿಗೆ ಭೇಟಿಯಿತ್ತಿದ್ದಾಗ ಅಲ್ಲಿನ 'ಚಲಿಸುವ ಶಿವ' ಎನಿಸಿದ್ದ ತ್ರೈಲಂಗ ಸ್ವಾಮಿಗಳ ಆಧ್ಯಾತ್ಮಿಕ ಮೇರು ವ್ಯಕ್ತಿತ್ವಕ್ಕೆ ಮಾರುಹೋದ ಉಲ್ಲೇಖ ಶ್ರೀರಾಮಕೃಷ್ಣ ವಚನವೇದದಲ್ಲಿ ಬರುತ್ತದೆ. ತ್ರೈಲಂಗಸ್ವಾಮಿಗಳ ಜೀವನದ ಕೆಲವು ವಿವರಗಳನ್ನು ಸುಂದರವಾಗಿ ನಿರೂಪಿಸಿರುವ ಪಿ. ಉಷಾ ಅವರು ವಾರಾಣಸಿಯ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಅವತಾರವರಿಷ್ಠ ಶ್ರೀರಾಮಕೃಷ್ಣ ಪರಮಹಂಸರು, "ಸಾಕ್ಷಾತ್ ವಿಶ್ವನಾಥನೇ ಅವರ ಶರೀರವನ್ನು ಆಶ್ರಯಿಸಿ ವಿರಾಜಿಸುತ್ತಿರುವುದನ್ನು ಕಂಡಿದ್ದೇನೆ. ಅತ್ಯುನ್ನತ ಸ್ತರದ ಜ್ಞಾನಿಗಳಾದ ಅವರು ಶರೀರಬೋಧೆಯನ್ನು ಮೀರಿರುವರು..." ಎಂದು ತ್ರೈಲಂಗ ಸ್ವಾಮಿಗಳ ಬಗ್ಗೆ ಉದ್ಗರಿಸಿದ್ದರು.

೧೭ನೇ ಶತಮಾನದ ಪ್ರಥಮ ಪಾದ. ಆಂಧ್ರಪ್ರದೇಶದ ವಿಜಯನಗರದಲ್ಲಿನ ಹೋಲಿಯಾ ಗ್ರಾಮದ ಓರ್ವ ಜಮೀನುದಾರರಾದ ನರಸಿಂಹರಾವ್ ಧರ್ಮಪರಾಯಣರು. ಅವರ ಪತ್ನಿ ವಿದ್ಯಾವತಿಯೂ ಒಬ್ಬ ಭಕ್ತ ಸಾಧಕಿ. ಪತಿ-ಪತ್ನಿಯರು ಸದಾ ದೇವರ ಪೂಜೆ, ಬ್ರಾಹ್ಮಣ ಸೇವೆ ಹಾಗೂ ಇತರ ಧರ್ಮಾಚರಣೆಗಳಲ್ಲಿ ನಿರತರಾಗಿದ್ದರು. ವಿವಾಹವಾಗಿ ಅನೇಕ ವರ್ಷಗಳಾಗಿದ್ದರೂ ರಾವ್ ದಂಪತಿಗಳಿಗೆ ಮಕ್ಕಳಾಗಲಿಲ್ಲ. ವಂಶೋದ್ಧಾರಕ್ಕಾಗಿ ನರಸಿಂಹರಾವ್ ಮರುವಿವಾಹವಾದಾಗ ವಿದ್ಯಾವತಿಯು ಮನೆಯಲ್ಲೇ ಪ್ರತಿಷ್ಠಿತವಾಗಿದ್ದ ಶಿವಲಿಂಗದ ಪೂಜೆಯಲ್ಲಿಯೇ ಹೆಚ್ಚಿನ ಸಮಯವನ್ನು ಕಳೆಯಲಾರಂಭಿಸಿದಳು. ಒಂದು ಶುಭದಿನ ಆಕೆಯು ಗಂಡುಶಿಶುವಿಗೆ ಜನ್ಮವಿತ್ತಾಗ, ಶಿವಕೃಪೆಯಿಂದ ಜನಿಸಿದ ಮಗುವಿಗೆ ಶಿವರಾಮ ಎಂದು ನಾಮಕರಣ ಮಾಡಿದರು. ಅನಂತರ ನರಸಿಂಹರಾಯರ ದ್ವಿತೀಯ ಪತ್ನಿಯೂ ಗಂಡುಮಗುವನ್ನು ಹಡೆದಳು. ಆ ಮಗುವಿಗೆ ಶ್ರೀಧರ ಎಂದು ಹೆಸರಿಟ್ಟರು.



ಯೋಗಿವರ್ಯರ ಜನನದಂತೆಯೇ ಅವರ ಬಾಲ್ಯವೂ ವಿಶೇಷ. ಒಮ್ಮೆ ಮಗು ಶಿವರಾಮನು ಶಾಂತವಾಗಿ ಆಟವಾಡುತ್ತಿದ್ದಾಗ ತಾಯಿ ವಿದ್ಯಾವತಿಯು ಧ್ಯಾನಮಗ್ನಳಾದಳು. ಆಟ ನಿಲ್ಲಿಸಿ ನಿದ್ರೆಗೈದ ಮಗುವನ್ನು ಆಕೆ ಗಮನಿಸಲಿಲ್ಲ. ಧ್ಯಾನಾನಂತರ ಕಣ್ತೆರೆದಾಗ ಅಲೌಕಿಕ ದೃಶ್ಯವನ್ನೇ ಕಂಡು ಬೆರಗಾದಳು. ತಾನು ಪೂಜಿಸುತ್ತಿದ್ದ ಶಿವನ ವಿಗ್ರಹದಿಂದ ಹೊರಹೊಮ್ಮಿದ ಜ್ಯೋತಿರ್ಧಾರೆಯು ಇಡೀ ಗರ್ಭಮಂದಿರವನ್ನು ಆವರಿಸಿ, ಮಲಗಿದ್ದ ಮಗುವಿನಲ್ಲಿ ಲೀನವಾಯಿತು. ಭೀತಿಗೊಂಡ ವಿದ್ಯಾವತಿಯನ್ನು ನರಸಿಂಹರಾವ್, "ಬರಿದೆ ಭಯಪಡಬೇಡ. ಶಿವಕೃಪೆಯಿಂದ ಪಡೆದ ಈ ಶಿಶುವು ನಿನ್ನ ದೀರ್ಘಕಾಲದ ಪೂಜಾಫಲವೆಂದು ಭಗವಂತನೇ ತೋರಿರುವನು" ಎಂದು ಸಂತೈಸಿದನು.

ಬಾಲಕ ಶಿವರಾಮನ ಸ್ವಭಾವವು ಶಿವನಂತೆ ಗಂಭೀರ. ಇತರ ಬಾಲಕರಂತೆ ಆಟಗಳಲ್ಲಿ ಅವನಿಗೆ ಆಸಕ್ತಿಯಿರಲಿಲ್ಲ. ಬಾಲಕನಾಗಿದ್ದಾಗಲೂ, ಕಿಶೋರನಾಗಿದ್ದಾಗಲೂ ಅವನು ಪ್ರಾಪಂಚಿಕ ವಿಷಯಗಳಲ್ಲಿ ತೋರುತ್ತಿದ್ದ ನಿರಾಸಕ್ತಿಯು ಯೌವನದಲ್ಲಿ ಮತ್ತೂ ಪ್ರಬಲಗೊಂಡಿತು. ಹುಡುಗನಲ್ಲಿ ತ್ಯಾಗ-ವೈರಾಗ್ಯಗಳು ಸಹಜವಾಗಿಯೇ ಇದ್ದುದನ್ನು ಕಂಡ ತಾಯಿಯು ಮಗನಿಗೆ ಸೂಕ್ತ ರೀತಿಯಲ್ಲಿಯೇ ಆಧ್ಯಾತ್ಮಿಕ ಜೀವನದಲ್ಲಿ ಮುನ್ನಡೆಯುವಂತೆ ಶಿಕ್ಷಣವನ್ನಿತ್ತಳು.

ವಂಶವನ್ನು ಮುಂದುವರಿಸಬೇಕಾದ ಕುಟುಂಬದ ಜ್ಯೇಷ್ಠ ಪುತ್ರನು ವೈರಾಗ್ಯ ತಳೆದರೆ ಹೇಗೆ? ನರಸಿಂಹರಾವ್ ಮಗನ ವಿವಾಹದ ವಿಚಾರ ಪ್ರಸ್ತಾಪಿಸಿದಾಗ ವಿದ್ಯಾವತಿಯು ತನ್ನ ಪತಿಗೆ, "ಶಿವರಾಮ ವಿವಾಹಕ್ಕೆ ಸಮ್ಮತಿಸುವುದಿಲ್ಲ. ಬ್ರಹ್ಮಚಾರಿಯಾಗಿಯೇ ಉಳಿದು ಸಾಧನೆ-ಭಜನೆಗಳಿಂದ ಭಗವತ್ಸಾಕ್ಷಾತ್ಕಾರದ ಸಂಕಲ್ಪವನ್ನು ಮಾಡಿದ್ದಾನೆ. ಇದು ಒಳ್ಳೆಯದೆ. ಅವನ ಇಷ್ಟಕ್ಕೆ ನಾವೇಕೆ

ತಡೆಯಾಗಬೇಕು? ಅವನು ಭಗವದ್ದರ್ಶನ ಲಾಭವನ್ನು ಪಡೆದು ವಂಶವನ್ನು ಬೆಳಗಿಸಲಿ. ಸಂಸಾರವನ್ನು ನಡೆಸಲು ಶ್ರೀಧರ ಇರುವನಲ್ಲ!" ಎಂದಾಗ ಇದು ಸರಿಯೆಂದು ಮನಗಂಡ ತಂದೆ ಮಗನ ಮದುವೆಯ ಯೋಚನೆಯನ್ನು ಕೈಬಿಟ್ಟರು.

ವರ್ಷಗಳು ಸಂದವು. ವೃದ್ಧ ತಂದೆತಾಯಿಯರು ತೀರಿಕೊಂಡಾಗ ಪಿತ್ರಾರ್ಜಿತ ಸಂಪತ್ತನ್ನು ತಮ್ಮನಾದ ಶ್ರೀಧರನಿಗೆ ಒಪ್ಪಿಸಿ, ಶಿವರಾಮನು ಸಂಸಾರ ಬಂಧನವನ್ನು ಪೂರ್ತಿಯಾಗಿ ಕತ್ತರಿಸಿಕೊಂಡನು ಹಳ್ಳಿಯ ಸ್ಮಶಾನದ ಮೂಲೆಯಲ್ಲಿ ಒಂದು  ಚಿಕ್ಕ ಪರ್ಣಕುಟೀರವನ್ನು ಕಟ್ಟಿಕೊಂಡು ಪರಮನಿಷ್ಠೆಯಿಂದ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ. ತಮ್ಮನ ಕಣ್ಣೀರು, ಬಂಧು-ಬಾಂಧವರ ವಿನಂತಿಗಳು ಇವಾವುವೂ ಅವನನ್ನು ವಿಚಲಿತನನ್ನಾಗಿಸಲಿಲ್ಲ. ಸಾಧನಾ ಕುಟೀರದ ಒಂದೆಡೆ ಚಿತಾಭಸ್ಮಭರಿತ ಸ್ಮಶಾನವಾದರೆ ಮತ್ತೊಂದೆಡೆ ತಂಪಾದ ನೀರು ಹರಿಯುತ್ತಿತ್ತು. ಈ ಹಿನ್ನೆಲೆಯಲ್ಲಿ ಜೀವನ-ಮರಣಗಳ ಕಡು ಸತ್ಯವನ್ನರಿಯುವ ಉದ್ದೇಶದಿಂದ ಶಿವರಾಮನು ೨೦ ವರ್ಷಗಳ ದೀರ್ಘ ತಪಸ್ಸನ್ನಾಚರಿಸಿದನು. ತ್ಯಾಗ-ತಿತಿಕ್ಷೆಗಳು ಕಡೆಗೂ ಫಲಿಸಿದವು. ಅದೃಷ್ಟವಶಾತ್ ಪಂಜಾಬಿನ ಯೋಗಿಗಳಾದ ಭಗೀರಥಾನಂದ ಸರಸ್ವತಿಯವರು ಶಿವರಾಮನ ಪರ್ಣಕುಟಿಗೆ ಆಗಮಿಸಿದಾಗ ಅವರನ್ನು ತನ್ನ ಗುರುವೆಂದು ಸ್ವೀಕರಿಸಿದನು. ಅವರ ನಿರ್ದೇಶನದಂತೆ ತನ್ನ ಗ್ರಾಮವನ್ನು ತೊರೆದ ಶಿವರಾಮನು ಭಾರತದ ನಾನಾ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದನು. ತಮ್ಮ ೭೮ನೆ ವಯಸ್ಸಿನಲ್ಲಿ ಪುಷ್ಕರ ತೀರ್ಥದಲ್ಲಿ ಸಂನ್ಯಾಸವನ್ನು ಸ್ವೀಕರಿಸಿ ಸ್ವಾಮಿ ಗಣಪತಿ ಸರಸ್ವತಿ ಎಂಬ ನಾಮವನ್ನು ಪಡೆದು ಮುಂದೆ ಕಾಶಿಧಾಮದಲ್ಲಿ ನೆಲೆ ನಿಂತಾಗ ತೆಲಂಗಾಣಕ್ಕೆ ಸೇರಿದ್ದ ಈ ಸ್ವಾಮಿಗಳನ್ನು "ತ್ರೈಲಂಗ ಸ್ವಾಮಿಗಳು" ಎಂದು ಜನರು ಕರೆಯತೊಡಗಿದರು.

ಸ್ವಾಮಿಗಳು ಮಹಾಯೋಗಿಗಳೆಂದು ಸಾರುವಂಥ ಅಲೌಕಿಕ ಘಟನೆಗಳು ಅನೇಕ. ತೀರ್ಥಯಾತ್ರೆಗೆಂದು ಅವರು ನೇಪಾಳಕ್ಕೆ ಹೋದ ಸಂದರ್ಭ. ಗೊಂಡಾರಣ್ಯವೊಂದರಲ್ಲಿ ತಪಸ್ಸನ್ನಾಚರಿಸುತ್ತಿದ್ದಾರೆ. ಒಂದು ದಿನ ಬೇಟೆಗೆಂದು ಬಂದ ಅಲ್ಲಿಯ ದೊರೆಯು ಹುಲಿಯೊಂದಕ್ಕೆ ಲಕ್ಷ್ಯವಿಟ್ಟ. ಪ್ರತಿಸಲವೂ ಲಕ್ಷ್ಯ ತಪ್ಪಿತು. ರಾಜನೂ ಪಣವನ್ನು ಬಿಡದೆ ಅದನ್ನು ಹಿಂಬಾಲಿಸಿದ. ಕೊನೆಗೆ ದೊಡ್ಡ ಮರವೊಂದರ ಕೆಳಗೆ ಕುಳಿತಿದ್ದ ಸಾಧುವು ಬೆಕ್ಕಿನಂತೆ ತನ್ನೆದುರಿದ್ದ ಹುಲಿಯ ಮೈ ಸವರುತ್ತಿರುವುದನ್ನು ಕಂಡು ಅವಾಕ್ಕಾದ. ಸಾಧು ರಾಜನನ್ನು ತನ್ನ ಬಳಿ ಕರೆದು ಪ್ರೀತಿಯಿಂದ ಆದೇಶಿಸಿದರು : "ಮಗು, ನಿನ್ನ ಮನಸ್ಸಿನಿಂದ ಹಿಂಸಾಪ್ರವೃತ್ತಿಯನ್ನು ದೂರಮಾಡು. ಆಗ ಹುಲಿಯು ನಿನಗೆ ಯಾವ ಕೇಡನ್ನೂ ಮಾಡದು. ಸಕಲ ಜೀವಿಗಳೂ ಭಗವಂತನದೇ ಸೃಷ್ಟಿ. ನೀನು ಈ ಮೃಗವನ್ನು ನಿಜವಾಗಿಯೂ ಪ್ರೀತಿಸಿದ್ದೇ ಆದರೆ ಇದೂ ನಿನ್ನನ್ನು ಪ್ರತಿಯಾಗಿ ಪ್ರೀತಿಸುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ."

ತ್ರೈಲಂಗ ಸ್ವಾಮಿಗಳ ಉದಾತ್ತ ಹೃದಯ ಹಾಗೂ ಅವರ ಗಾಢವಾದ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವಂತಹ ಮತ್ತೊಂದು ದೃಷ್ಟಾಂತ. ಗ್ರೀಷ್ಮ ಋತು. ಪ್ರಯಾಗಕ್ಕೆ ಬಂದಿದ್ದ ಅವರು ತ್ರಿವೇಣಿ ಸಂಗಮದ ತುಟದಲ್ಲಿ ಆರಾಮವಾಗಿ ಕುಳಿತಿದ್ದಾರೆ. ಮುಗಿಲಿನಲ್ಲಿ ಕಾರ್ಮೋಡಗಳು ಕವಿದಿವೆ. ಯಾವ ಕ್ಷಣದಲ್ಲಾದರೂ ಭಾರಿ ಮಳೆ  ಶುರುವಾಗಬಹುದು. ಸ್ವಾಮಿಗಳ ನಿರ್ಲಿಪ್ತತೆಯನ್ನು ಗಮನಿಸುತ್ತಿದ್ದ ಭಕ್ತನೊಬ್ಬನು ಚಿಂತಿತನಾದ. ಮಳೆ ಪ್ರಾರಂಭವಾದರೇನು ಗತಿ? ಭಕ್ತನ ಮನದಾಳದಲ್ಲಿನ ಯೋಚನೆಯನ್ನರಿತ ಸ್ವಾಮಿಗಳೆಂದರು : "ನನಗಾಗಿ ಚಿಂತಿಸಬೇಡ. ನನಗೇನೂ ಕಷ್ಟವಾಗದು. ಆದರೆ ನದಿಯಲ್ಲಿ ತೇಲುತ್ತಿರುವ ದೋಣಿಯಲ್ಲಿರುವ ಹತ್ತಾರು ಜನರ ಪಾಡೇನು? ಆ ದೋಣಿಯನ್ನು ರಕ್ಷಿಸಬೇಕು." ಹೀಗೆನ್ನುತ್ತಿದ್ದಂತೆಯೇ ಭೀಕರ ಬಿರುಗಾಳಿ-ಮಳೆಗೆ ಸಿಲುಕಿದ ದೋಣಿ ನದಿಮಧ್ಯದಲ್ಲಿ ಅದೃಶ್ಯವಾಯಿತು. ಅದೆಂತಹ ಹೃದಯ ವಿದ್ರಾವಕ ನೋಟ! ಭಕ್ತನ ಕಣ್ಣುಗಳಿಂದ ಕಂಬನಿ ಹರಿಯ ತೊಡಗಿದಂತೆಯೇ ಸ್ವಾಮಿಗಳು ಕುಳಿತಿದ್ದ ಆಸನವು ಖಾಲಿಯಾಯಿತು. ಇಂದ್ರಜಾಲವೊ ಎಂಬಂತೆ ಕೆಲವೇ ಕ್ಷಣಗಳಲ್ಲಿ ದೋಣಿಯು ಮತ್ತೆ ನೀರಮೇಲೆ ಕಾಣಿಸಿಕೊಂಡು ಕ್ಷೇಮವಾಗಿ ದಡ ಸೇರಿತು. ಅಪಾರ ಕರುಣಾಮಯ ಸಾಧುಗಳು ಅಂದು ದೋಣಿಯ ಪ್ರಯಾಣಿಕರನ್ನು ಸಾವಿನ ದವಡೆಯಿಂದ ಪಾರು ಮಾಡಿದ್ದರು. ಭಕ್ತನು ವಿಸ್ಮಿತನಾದುದನ್ನು ಕಂಡ ಅವರು ಸಹಜವಾಗಿಯೇ ಹೇಳಿದರು: "ಇದರಲ್ಲಿ ಆಶ್ಚರ್ಯಕರವಾದುದು ಏನೂ ಇಲ್ಲ. ಇಂತಹ ಶಕ್ತಿಯು ಪ್ರತಿಯೊಬ್ಬ ಮನುಷ್ಯನಲ್ಲೂ ಸುಪ್ತವಾಗಿದೆ. ಇದನ್ನು ಜಾಗೃತಗೊಳಿಸಿದರೆ ಎಲ್ಲವೂ ಸಾಧ್ಯ. ವಾಸ್ತವಿಕವಾಗಿ, ಮನುಷ್ಯನು ತನ್ನ ಪ್ರಕೃತ ಸ್ವಭಾವದಿಂದ ಚ್ಯುತನಾಗಿ ಅಸ್ವಾಭಾವಿಕವಾಗಿ ವರ್ತಿಸುತ್ತಿದ್ದಾನೆ. ಯಾವುದು ಅತಿ ಸಹಜವೊ ಅದನ್ನೇ ಅಲೌಕಿಕವೆಂದೂ ಅದ್ಭುತವೆಂದೂ ತಿಳಿದು ವಿಸ್ಮಯಗೊಳ್ಳುತ್ತಾನೆ."

ಶರೀರಬೋಧೆಯನ್ನು ಮೀರಿದ್ದ ತ್ರೈಲಂಗ ಸ್ವಾಮಿಗಳು ಸದಾ ದಿಗಂಬರರಾಗಿ ಗಂಗಾತೀರದಲ್ಲಿ ವಿಹರಿಸುತ್ತಿದ್ದರು. ಅನೇಕ ಬಾರಿ ಪೊಲೀಸರು ಈ ಅಪರಾಧಕ್ಕಾಗಿ ಅವರನ್ನು ಬಂಧಿಸುತ್ತಿದ್ದರೂ, ಆಧ್ಯಾತ್ಮಿಕತೆಯ ಉನ್ನತ ಶಿಖರದಲ್ಲಿ ನೆಲೆನಿಂತವರೆಂದು ತಿಳಿದಾಗ ಅವರನ್ನು ಬಿಟ್ಟುಬಿಡಬೇಕಾಗುತ್ತಿತ್ತು. ಗಂಟೆಗಟ್ಟಲೆ ಸ್ವಾಮಿಗಳು ಜಲವಿಹಾರ ಮಾಡುತ್ತಿದ್ದುದು ಕಾಶಿಯ ಜನತೆಗೆ ತಿಳಿದ ವಿಚಾರ. ಉಜ್ಜಯಿನಿಯ ರಾಜನು ಶಿವಪುರಿಯಾದ ಕಾಶಿಗೆ ಬಂದಿದ್ದ. ಗಂಗೆಯಲ್ಲಿ ನೌಕಾವಿಹಾರ ಮಾಡುತ್ತಿದ್ದಾಗ ನದಿಯಲ್ಲಿ ವಿಹರಿಸುತ್ತಿದ್ದ ದೃಢಕಾಯ ಪುರುಷರು ಬ್ರಹ್ಮಜ್ಞರಾದ ತ್ರೈಲಂಗ ಸ್ವಾಮಿಗಳೆಂದು ತಿಳಿದು ಗೌರವದಿಂದ ಅವರನ್ನು ತನ್ನ ದೋಣಿಯಲ್ಲಿ ಕುಳ್ಳಿರಿಸಿಕೊಂಡ. ದೋಣಿಯಲ್ಲಿದ್ದ ಕೆಲವರು ಸ್ವಾಮಿಗಳ ಭಕ್ತರೂ ಹೌದು. ಕೆಲವೊಮ್ಮೆ ಬಾಲಕರಂತೆ ವರ್ತಿಸುತ್ತಿದ್ದ ಸ್ವಾಮಿಗಳು ರಾಜನ ಬೆಲೆಬಾಳುವ ಖಡ್ಗವನ್ನು ತಮ್ಮ ಕೈಗೆತ್ತಿಕೊಂಡು ತುಂಬ ಆನಂದಪಟ್ಟರು. ಬಳಿಕ ಅದನ್ನು ಗಂಗೆಗೆ ಎಸೆದುಬಿಟ್ಟರು! ದಡ ಸೇರಿದ ತಕ್ಷಣ ಯಾರನ್ನಾದರೂ ನದಿಗಿಳಿಸಿ ಖಡ್ಗವನ್ನು ಮತ್ತೆ ತರಿಸಿಕೊಡುವುದಾಗಿ ರಾಜನಿಗೆ ಸ್ವಾಮಿಗಳ ಭಕ್ತರು ಭರವಸೆ ನೀಡಿದರೂ, ತನ್ನ ಅತ್ಯಮೂಲ್ಯ ವಸ್ತುವನ್ನು ಕಳೆದುಕೊಂಡ ರಾಜನು ಬಹಳವೇ ಕ್ರೋಧಗೊಂಡ. ನೌಕೆ ದಡ ಸೇರುತ್ತಲೇ  ದಿಗಂಬರ

ಸಾಧುಗಳು ನದಿಗೆ ಹಾರಿ ಒಂದೇ ನಮೂನೆಯ ಎರಡು ಖಡ್ಗಗಳನ್ನು ಮೇಲ್ತಂದು ಅವುಗಳನ್ನು ರಾಜನ ಮುಂದಿಟ್ಟು, ತನ್ನದನ್ನು ಗುರುತಿಸಿ ಆರಿಸಿಕೊಳ್ಳಬಹುದೆಂದು ಹೇಳಿದಾಗ ರಾಜನಿಗೆ ದಿಗ್ಭ್ರಮೆಯಾಯಿತು. ಯಾವುದೇ ಭಿನ್ನತೆ ಕಾಣದ ಈ ಎರಡು ಖಡ್ಗಗಳಲ್ಲಿ ತನ್ನದನ್ನು ಗುರುತಿಸುವ ಬಗೆ ಹೇಗೆ? ರಾಜನ ಅಸಹಾಯಕತೆಯನ್ನು ಕಂಡ ಯೋಗಿವರರು ನಕ್ಕು ಹೇಳಿದರು, "ಎಲೈ ಮೂರ್ಖ, ನಿನ್ನದೇ ಸ್ವಂತ ವಸ್ತುವನ್ನು ಗುರುತಿಸಲಾರೆಯಾ? ನಿನ್ನಲ್ಲಿರುವುದು ಬರಿಯ ಮೋಹ, ಅಹಂಕಾರ ಹಾಗೂ ಅಜ್ಞಾನ, ಅಷ್ಟೆ. ಇಹದಲ್ಲೂ ಪರದಲ್ಲೂ ಮನುಷ್ಯನೊಂದಿಗೆ ಸದಾ ಇರುವ ವಸ್ತುವನ್ನು ಮಾತ್ರವೇ ಅವನ ಸ್ವಂತದ್ದೆಂದು ಹೇಳಬಹುದು. ಮರಣಾನಂತರ ನಿನ್ನ ಖಡ್ಗ ನಿನ್ನೊಂದಿಗೆ ಬಾರದು. ಯಾವುದನ್ನು ತೆಗೆದುಕೊಂಡು ಆ ಕಡೆ ಹೋಗಲಾರೆಯೋ ಅದು ನಿನ್ನದಾಗುವುದಾದರೂ ಎಂತು? ನಿನ್ನದಲ್ಲದ ವಸ್ತುವಿಗಾಗಿ ಇಷ್ಟೊಂದು ದಂಭ, ಕ್ರೋಧಗಳು ಸಲ್ಲದು." ರಾಜನ ಖಡ್ಗವನ್ನು ಅವನಿಗೆ ಹಿಂದಿರುಗಿಸಿ ಮತ್ತೊಂದನ್ನು ಮತ್ತೆ ನದಿಗೆಸೆದರು. ರಾಜನ ಕಣ್ಣು ತೆರೆಯಿತು; ಕ್ಷಮೆ ಯಾಚಿಸುತ್ತ ಸಾಧುಗಳ ಚರಣಗಳಿಗೆರಗಿದ.

ಶ್ರೀರಾಮಕೃಷ್ಣರು ಮಥುರನಾಥನೊಂದಿಗೆ ಕಾಶಿಗೆ ಹೋಗಿದ್ದಾಗ ಶ್ರೀವಿಶ್ವೇಶ್ವರನ ದರ್ಶನಾನಂತರ ಹೃದಯನೊಂದಿಗೆ "ಚಲಿಸುವ ಶಿವ" ತ್ರೈಲಂಗಸ್ವಾಮಿಗಳ ದರ್ಶನಕ್ಕಾಗಿ ಹೋದರು. ಯೋಗೀಶ್ವರರೂ, ಸಕಲಯೋಗ ಪಾರಂಗತರೂ ಆಗಿದ್ದ ಶ್ರೀರಾಮಕೃಷ್ಣ ಪರಮಹಂಸರನ್ನು ಕಂಡೊಡನೆ ತ್ರೈಲಂಗಸ್ವಾಮಿಗಳು ಪರಮಾನಂದದಿಂದ ತಮ್ಮ ನಶ್ಯದ ಡಬ್ಬಿಯನ್ನು ಅರ್ಪಿಸುತ್ತ ಅವರನ್ನು ಆದರದಿಂದ ಸ್ವಾಗತಿಸಿದರು. ಸ್ವಾಮಿಗಳ ದೇಹವನ್ನು ಕೂಲಂಕಷವಾಗಿ ಪರೀಕ್ಷಿಸಿದ ಶ್ರೀರಾಮಕೃಷ್ಣರು ಹೃದಯನಿಗೆ ಹೇಳಿದರು : "ನೋಡಿದೆಯಾ, ಸಾಕ್ಷಾತ್ ವಿಶ್ವೇಶ್ವರನಾದ ಇವರಲ್ಲಿ ಪರಮಹಂಸರ ಸಕಲ ಲಕ್ಷಣಗಳೂ ರಾರಾಜಿಸುತ್ತಿವೆ." ಸ್ವಾಮಿಗಳಿಗೊಮ್ಮೆ ಖೀರು ಭೋಜನವನ್ನುಉಣಬಡಿಸಬೇಕೆಂಬ ಶ್ರೀರಾಮಕೃಷ್ಣರ ಇಚ್ಛೆಯನ್ನು ಮಥುರಬಾಬು ಈಡೇರಿಸಿದಾಗ ಶ್ರೀರಾಮಕೃಷ್ಣರು ಸ್ವತಃ ಅವರಿಗದನ್ನು ತಿನ್ನಿಸಿ ಸಂತೋಷಪಟ್ಟರು. ಮುಂದೆ ತ್ರೈಲಂಗಸ್ವಾಮಿಗಳ ಬಗ್ಗೆ ತಮ್ಮ ಶಿಷ್ಯರಿಗೆ ಹೀಗೆ ಹೇಳುತ್ತಾರೆ : "ಭಗವಂತ ಒಬ್ಬನೋ, ಅನೇಕನೋ ಎಂದು ನಾನವರನ್ನು ಕೇಳಿದಾಗ ಮೌನಿಯಾಗಿದ್ದ ಅವರು ಕೈಸನ್ನೆ ಮಾಡಿ ಉತ್ತರಿಸಿದರು, 'ಸಮಾಧಿಸ್ಥಿತಿಯಲ್ಲಿದ್ದು ನೋಡಿದಾಗ, ಒಂದು; ನಾನು, ನೀನು, ಜೀವ-ಜಗತ್ತು ಎಂಬ ಪರಿಜ್ಞಾನವಿದ್ದಾಗ ಅನೇಕ' ಎಂದು... ಭಗವತ್ಸಾಕ್ಷಾತ್ಕಾರದ ಬಳಿಕ ಮನುಷ್ಯನು ತರ್ಕ ವಿಚಾರಗಳನ್ನು ಬಿಟ್ಟುಬಿಡುತ್ತಾನೆ. ಯಾವಾಗ ಪ್ರಪಂಚ, ಜೀವಿಗಳು, ನಾನು, ನೀನು ಎಂಬ ಭೇದವನ್ನು ಮೀರಿ ಐಕ್ಯತೆಯನ್ನು ಹೊಂದುತ್ತಾನೋ ಆಗ ಅವನು ಮೌನಿಯಾಗುತ್ತಾನೆ. ಇದಕ್ಕೆ ಉದಾಹರಣೆ ಎಂದರೆ ತ್ರೈಲಂಗಸ್ವಾಮಿಗಳು."

ವಾರಾಣಸಿಯಲ್ಲಿ ಸುಮಾರು ೧೫೦ ವರ್ಷಗಳ ಕಾಲವನ್ನು ಕಳೆದ ಈ "ಚಲಿಸುವ ಶಿವ" ಯಾವ ಮಠವನ್ನಾಗಲಿ, ಆಶ್ರಮವನ್ನಾಗಲಿ ಸ್ಥಾಪಿಸಲಿಲ್ಲ. ಸಚ್ಚಿದಾನಂದ ಸಾಗರದಲ್ಲಿ, ಸ್ವೇಚ್ಛೆಯಿಂದ ಈಜಾಡುವ ಮೀನಿನಂತೆ, ತಮ್ಮ ಜೀವನವನ್ನು ಕಳೆದರು. ತಮ್ಮ ಅಂತ್ಯ ಸಮೀಪಿಸಿದಾಗ ಒಂದು ದಿನ ಇದ್ದಕ್ಕಿದ್ದಂತೆ ತಾವು ಶರೀರವನ್ನು ತ್ಯಜಿಸುವ ವಿಚಾರವನ್ನು ಭಕ್ತರಿಗೆ ತಿಳಿಸಿದರು. ಕಣ್ಣೀರಿಡುತ್ತ ಭಕ್ತರು, "ಬಾಬಾ, ಇದೇನು ನೀವು ಹೇಳುತ್ತಿರುವುದು? ನೀವು ಹೊರಟುಹೋದರೆ ನಮ್ಮ ಗತಿ ಏನು?" ಎಂದಾಗ ಶಾಂತಚಿತ್ತರಾಗಿ ಅವರೆಂದರು : "ನಾನೇನು ನಿಮ್ಮನ್ನು ಸಂಪೂರ್ಣವಾಗಿ ಅಗಲಿಹೋಗುತ್ತಿದ್ದೇನೆಯೆ? ಈ ದೇಹವು ಹಳೆಯ ವಸ್ತ್ರದಂತೆ ತುಂಬ ಜೀರ್ಣವಾಗಿದೆ. ಇದನ್ನೀಗ ಬದಲಾಯಿಸಬೇಕಾಗಿದೆ." ಭಕ್ತನೊಬ್ಬನು ಹೇಳಿದ : "ಹೀಗೆಂದರೆ ಹೇಗೆ? ಆದರೂ, ತಾವು ತಮ್ಮ ನಿರ್ಧಾರವನ್ನು ಬದಲಾಯಿಸುವುದಿಲ್ಲ ಎಂಬುದೂ ನಮಗೆ ಗೊತ್ತು. ನಮ್ಮ ಮನಸ್ಸನ್ನು ತಯಾರು ಮಾಡಿಕೊಳ್ಳಲು ಸ್ವಲ್ಪ ಸಮಯ ಕೊಡಿ. ನಿಮ್ಮದೊಂದು ಶಿಲಾಪ್ರತಿಮೆಯನ್ನು ಮಾಡಿಟ್ಟುಕೊಳ್ಳುತ್ತೇವೆ." "ಅಲ್ಲ, ಈ ರಕ್ತ-ಮಾಂಸಗಳ ಶರೀರ, ಕಲ್ಲಿನ ಮೂರ್ತಿ—ಇವುಗಳಿಂದೇನು ಪ್ರಯೋಜನ? ಇಷ್ಟು ದಿನಗಳು ನನ್ನೊಂದಿಗಿದ್ದೂ ನಿಮಗಿಂಥ ಅಜ್ಞಾನವೇ?" "ಬಾಬಾ, ನಾವಾದರೋ ಬದ್ಧಜೀವಿಗಳು. ನಿಮ್ಮನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ನಮಗಿಲ್ಲ. ಆದರೆ ನೀವೇನೇ ಹೇಳಿ, ನಿಮ್ಮ ಮಹಾಸಮಾಧಿಯ ಅನಂತರ ಈ ನಿಮ್ಮ ಸಾಧನಾಕ್ಷೇತ್ರದಲ್ಲಿ ಭಕ್ತಿಯಿಂದ ಗಂಗಾ ಜಲ, ಅರ್ಘ್ಯಪುಷ್ಪಾಂಜಲಿಗಳಿಂದ ನಿಮ್ಮನ್ನು ಪೂಜಿಸಿ ಕೃತಾರ್ಥರಾಗಲು ನಿಮ್ಮ ವಿಗ್ರಹ ನಮಗೆ ಆವಶ್ಯಕ." ಭಕ್ತರ ಎದೆಯಾಳದಿಂದ ಬಂದ ಈ ನುಡಿಗಳಿಂದ ತ್ರೈಲಂಗಸ್ವಾಮಿಗಳ ಮುಖದಲ್ಲಿ ಮಂದಹಾಸವು ಮೂಡಿತು. ಭಕ್ತರ ವಿನಂತಿಗೆ ಒಪ್ಪಿ ತಮ್ಮ ಮರಣವನ್ನೆ ಸರಿಯಾಗಿ ಒಂದು ತಿಂಗಳ ಮಟ್ಟಿಗೆ ಮುಂದೂಡಿದರು. ತಮ್ಮ ಮಹಾಪ್ರಯಾಣದ ಹಿಂದಿನ ದಿನ ಭಕ್ತರ ಕೋರಿಕೆಯಂತೆ ಅವರಿಗೆ ಆಧ್ಯಾತ್ಮಿಕ ಸಾಧನೆಗೆ ಉಪಯುಕ್ತವಾದ ಉಪದೇಶಗಳನ್ನು ನೀಡಿದರು. ಪುಷ್ಯಮಾಸದ ಶುಕ್ಲ-ಏಕಾದಶಿಯ ಪುಣ್ಯತಿಥಿಯಂದು ಯೋಗಸಾಧನೆಯ ಈ ಪ್ರದೀಪ್ತ ಭಾಸ್ಕರರು ಸುಮಾರು ೨೭೫ ವರ್ಷಗಳ ತಮ್ಮ ಮರ್ತ್ಯಲೀಲೆಯನ್ನು ಸಮಾಪ್ತಿಗೊಳಿಸಿದರು.

### ಎರಡು ತೋಳಗಳು

ಗುರು ಶಿಷ್ಯರಿಗೆ ಉಪದೇಶ ನೀಡುತ್ತಿದ್ದನು; " ನಮ್ಮೊಳಗೆ ಎರಡು ತೋಳಗಳ ನಡುವೆ ಭಾರೀ ಯುದ್ಧ ನಡೆಯುತ್ತಿದೆ. ಒಂದು ತೋಳ ಕಾಮ,ಕ್ರೋಧ, ಲೋಭ, ಭಯ, ಚಿಂತೆ ಅಹಂಕಾರ ಮುಂತಾದ ನಿಷೇಧಾತ್ಮಕ ಭಾವಗಳನ್ನು ಪ್ರತಿನಿಧಿಸುತ್ತದೆ. ಇನ್ನೊಂದು ತೋಳ ಪ್ರೀತಿ, ದಯೆ, ಸಹಾನುಭೂತಿ, ಉದಾರತೆ, ನಮ್ರತೆ ಮುಂತಾದ ಸಕಾರಾತ್ಮಕ ಭಾವಗಳನ್ನು ಪ್ರತಿನಿಧಿಸುತ್ತದೆ " "ಈ ಯುದ್ಧದಲ್ಲಿ ಯಾವ ತೋಳ ಗೆಲ್ಲುತ್ತದೆ?" ಒಬ್ಬ ಶಿಷ್ಯ ಕೇಳಿದ.

**" ಯಾವುದನ್ನು ನೀನು ಆಹಾರಕೊಟ್ಟು ಪೋಷಿಸುತ್ತೀಯೋ ಅದು" ಎಂದು ಗುರು ಉತ್ತರಿಸಿದನು.**

( ಸಾಧಾರ : ಇಂಟರ್‌ನೆಟ್)